**ದಿನಾಂಕ 13.01.2025** **ಓ ಎಸ್ 65/2023**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.** **ಪಿಡಬ್ಲ್ಯೂ – 1**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ಪಿಡಬ್ಲ್ಯೂ 1 ರವರು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿಪಿ–9 | ದಿನಾಂಕ 15.10.2024 ರಂದು RACR 51/2022–23 ರಲ್ಲಿ ಜಿಲ್ಲಾಧಿಕಾರಿಗಳ ನ್ಯಾಯಾಲಯ, ದಾವಣಗೆರೆ ಇವರು ಹೊರಡಿಸಿದ ಆದೇಶದ ಪತ್ರದ ದೃಢೀಕೃತ ನಕಲು |

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನು ಮತ್ತು ನನ್ನ ಗಂಡ ಮಾಹಿತಿ ನೀಡಿರುತ್ತೇವೆ.. 1 ನೇ ವಾದಿ ಶಿವಣ್ಣ ನನ್ನ ಗಂಡ. ನನ್ನ ಮದುವೆ ಆಗಿ ಈಗ ಸುಮಾರು 30 ವರ್ಷ ಆಗಿರಬಹುದು. 1 ನೇ ವಾದಿ ಶಿವಣ್ಣ ನನ್ನ ಗಂಡ ಎಂದು ಹೇಳಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ತಂದೆಯ ಹೆಸರು ರುದ್ರಪ್ಪ, ರುದ್ರಪ್ಪನವರ ತಂದೆಯ ಹೆಸರು ವೀರಭದ್ರಪ್ಪ. 1 ನೇ ವಾದಿಯ ತಂದೆ ಮತ್ತು ಅಜ್ಜನ ಕಾಲದಲ್ಲಿ ಕುಟುಂಬದಲ್ಲಿ ಏನೇನು ವ್ಯವಹಾರಗಳು ನಡೆದಿರುತ್ತವೆ ಎಂದು ನನ್ನ ಗಂಡನಿಗೆ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ಗಂಡ 1 ನೇ ವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಸತ್ಯ ಗೊತ್ತಾಗುತ್ತದೆ ಎಂದು ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮೂರು ಜನ ಮಕ್ಕಳು, ಅವರಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ನನ್ನ ಮದುವೆಯ ಪೂರ್ವದಲ್ಲಿ ನನ್ನ ಗಂಡನ ಕುಟುಬಂದಲ್ಲಿ ನಡೆದ ವ್ಯವಹಾರಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯೂ ಮೂಲತಃ ನನ್ನ ಪಿತ್ರಾರ್ಜಿತ ಆಸ್ತಿ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ದಾವಾ ಆಸ್ತಿಯು ನನ್ನ ತಂದೆ ಅಥವಾ ತಾಯಿಯಿಂದ ನನಗೆ ಬಂದಂತಹ ಆಸ್ತಿ ಅಲ್ಲ ಎಂದರೆ ಸರಿ. ಆದ್ದರಿಂದ ದಾವಾ ಆಸ್ತಿಯು ನನ್ನ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿ. ಸಾಕ್ಷಿಯು ಮಂದುವರೆದು ದಾವಾ ಆಸ್ತಿಯು ನನ್ನ ಗಂಡನಿಂದ ನನಗೆ ಬಂದ ಆಸ್ತಿ ಎಂದು ನುಡಿಯುತ್ತಾರೆ. ನನ್ನ ಗಂಡ ದಾವಾ ಅಸ್ತಿಯನ್ನು ದಾನ ಪತ್ರದ ಮೂಲಕವಾಗಲೀ, ಕ್ರಯ ಪತ್ರದ ಮೂಲಕವಾಗಲೀ ಅಥವಾ ಯವುದೇ ಪತ್ರದಗಳ ಮೂಲಕ ನನ್ನ ಹೆಸರಿಗೆ ವರ್ಗಾವಣೆ ಮಾಡಿಲ್ಲ ಎಂದರೆ ಸರಿ. ಆದ್ದರಿಂದ ದಾವಾ ಆಸ್ತಿಯಲ್ಲಿ ನನಗೆ ವೈಯಕ್ತಿಕವಾಗಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿ. ಮಾನ್ಯ ಉಪವಿಭಾಗಧೀಕಾರಿಗಳ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ನಾವು ಸಲ್ಲಿಸಿದ್ದೆವು. ಯಾವ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿದ್ದೆ ಎಂದರೆ ಸಾಕ್ಷಿಯು ಉತ್ತರಿಸದೇ ಮೌನವಾಗಿ ನಿಂತಿರುತ್ತಾರೆ. ಮೇಲ್ಮನವಿಯನ್ನು ಸಲ್ಲಿಸುವ ಪೂರ್ದಲ್ಲಿ ದಾವಾ ಆಸ್ತಿಯು ರುದ್ರಪ್ಪನವರ ಹೆಸರಿಗೆ ಇತ್ತು. ಸದರಿ ವಿಚಾರವಾಗಿ ನಾನು ಪಹಣಿ ಷತ್ರಿಕೆಗಳನ್ನು ನೋಡಿರುತ್ತೇನೆ. ಮೇಲ್ಮನವಿ ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿಯು ರದ್ರಪ್ಪನವರ ಹೆಸರಿಗೆ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ದಿನಾಂಕ 13.01.2025** **ಓ ಎಸ್ 65/2023**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.** **ಪಿಡಬ್ಲ್ಯೂ-1**

ಹಕ್ಕು ದಾಖಲಾತಿ ಐ ಹೆಚ್ ಇ ನಂ.12/1980-81 ನೇದ್ದರ ಹಕ್ಕು ಬದಲಾವಣೆ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಹಕ್ಕು ಬದಲಾವಣೆ ಆದೇಶ ಬಗ್ಗೆ ನನಗೆ ಮಾಹಿತಿ ಇದೆ. ಹಕ್ಕು ದಾಖಲಾತಿ ಐ ಹೆಚ್ ಇ ನಂ.12/1980-81 ಆದೇಶದಲ್ಲಿ 1 ನೇ ಪ್ರತಿವಾದಿಯ ಉಜಿನಪ್ಪ, 2 ರಿಂದ 4 ನೇ ಪ್ರತಿವಾದಿಯ ತಂದೆ ತಿಪ್ಪಣ್ಣ ಮತ್ತು ನನ್ನ ಗಂಡನ ತಂದೆ ರುದ್ರಪ್ಪ ರವರ ನಡುವೆ ಜಮೀನಿನ ಪಾಲು ವಿಭಾಗ ಆಗಿರುವ ಬಗ್ಗೆ ನಮೂದು ಮಾಡಲಾಗಿದೆ ಎಂದರೆ ಸರಿ. 1980-81 ರಲ್ಲಿ ಆದಾ ಪಾಲು ವಿಭಾಗದಲ್ಲಿ ಉಜಿನಪ್ಪ ನವರಿಗೆ 2.38.50 ಗುಂಟ ಮತ್ತು ತಿಪ್ಪಣ್ಣ ರವರಿಗೆ 2.38.50 ಎಕರೆ ಜಮೀನು ಜುಬಾನಿ ಪಾಲು ವಿಭಾಗದಿಂದ ಬಂದಿರುತ್ತದೆ ಎಂದರೆ ಸಾಕ್ಷಿಯು ಮುಂದುವರೆದು ಸದರಿಯವರು ಪಾಲು ವಿಕಿಗ ಪತ್ರದಲಿ ತಿದ್ದುಪಡಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಾಲುವಿಭಾಗದಲ್ಲಿ ನನ್ನ ಗಂಡ 1 ನೇ ವಾದಿಗೆ 5 ಎಕರೆ 7 ಗುಂಟು ಜಮೀನು ಬಂದಿರುತ್ತೆ ಎಂರದೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ